# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಜಾರಿ ನಂ.12-2021** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಸಾದರಳಯ್ಯ<br>ಮದ್ದೂರು ಟೌನ್, ಮಂಡ್ಯ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 12-10-2022.** |

**<u>ಪಾಟೀ ಸವಾಲು ತೀರ್ಪುಋಣಿದಾರರ ಪರ ವಕೀಲರಾದ ಶ್ರೀ ಕೆ.ಎಸ್.ಎಂ ರವರಿಂದಃ-</u>**

ನಾನು ತೀರ್ಪುಋಣಿದಾರು ಮತ್ತು ಅವರ ತಂದೆಯವರಿಂದ ಮೂಲ ಸರ್ವೇ ನಂ.42/2 ಬಿ1 ರ ಒಟ್ಟಾರೆ ವಿಸ್ತೀರ್ಣ 0.32 ಗುಂಟೆ ಪೈಕಿ 0.12 ಗುಂಟೆ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿ. ಉಳಿದ 0.20 ಗುಂಟೆ ಸ್ವತ್ತಿನಲ್ಲಿ ತೀರ್ಪುಋಣಿದಾರರು ಸ್ವಾಧೀನದಲ್ಲಿ ಇರುತ್ತಾರೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನಗೆ ಮಾರಾಟ ಮಾಡಿ ಉಳಿದ 0.20 ಗುಂಟೆ ಸ್ವತ್ತಿನ ಪಹಣಿ ಪತ್ರಿಕೆಯೂ ತೀರ್ಪುಋಣಿದಾರರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಇದೇ ನ್ಯಾಯಾಲಯದಲ್ಲಿ ತೀರ್ಪುಋಣಿದಾರರು ನನ್ನ ವಿರುದ್ಧ ಅಸಲು ದಾವಾ ಸಂ.3/2021 ರಂತೆ ದಾವಾ ಸಲ್ಲಿಸಿರುತ್ತಾರೆ ಎಂದರೆ ಸರಿ. ತೀರ್ಪುಋಣಿದಾರರು ನಾಮಫಲಕ ಹಾಕಿರುವ ದಾಖೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನಿಪಿ-11 ರಂತೆ ನಾಮಫಲಕ ಹಾಕಿರುವ ಬಗ್ಗೆ ಪೋಟೋವನ್ನು ಹಾಜರುಪಡಿಸಿರುತ್ತೇನೆ.

2. ನಾನು ತೀರ್ಪುಋಣಿದಾರರಿಂದ ಕ್ರಯಕ್ಕೆ ಪಡೆದ 0.12 ಗುಂಟೆ ಸ್ವತ್ತಿನ ಪೈಕಿ 0.9 3/4 ಗುಂಟೆ ಸ್ವತ್ತು ಅನ್ಯಕ್ರಾಂತವಾಗಿರುತ್ತದೆ. ನಾನು ಕ್ರಯಕ್ಕೆ ಪಡೆದ ಸ್ವತ್ತಿನ ಸುತ್ತ ತಂತಿ ಬೇಲಿಯನ್ನು ಹಾಕಿಕೊಂಡಿರುತ್ತೇನೆ ಎಂದರೆ ಸರಿ. ನಾನು ಅಸಲು ದಾವಾ ಸಂ.283/2012 ರ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಂತಿ ಬೇಲಿಯನ್ನು ಹಾಕಿಕೊಂಡಿರುತ್ತೇನೆ. ನಿಪಿ-11 ರಲ್ಲಿ ಕಾಣುತ್ತಿರುವ ನಾಮಫಲಕವು ತಾವು ಹಾಕಿರುವ ತಂತಿಬೇಲಿಯ ನಂತರ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಹಾಕಿರುವ ತಂತಿಬೇಲಿಗೆ ಹೊಂದಿಕೊಂಡಂತೆ ಇರುತ್ತದೆ. ನಿಪಿ-11 ರಲ್ಲಿ

ಕಾಣುತ್ತಿರುವ ಕಂಬವು ತೀರ್ಪುಋಣಿದಾರರ ಉಳಿಕೆ 0.20 ಗುಂಟೆ ಸ್ವತ್ತಾಗಿರುತ್ತದೆ ಎಂದರೆ ಸರಿ. ಸದರಿ ನಾಮಫಲಕವನ್ನು ರಾಷ್ಟ್ರಿಯ ಹೆದ್ದಾರಿಗೆ ಹೊಂದಿಕೊಂಡಂತೆ ಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ–11 ರಲ್ಲಿ ಕಾಣುತ್ತಿರುವ ನಾಮಫಲಕವು ನಾನು ಕ್ರಯಕ್ಕೆ ಪಡೆದ ಸ್ವತ್ತಿನ ಒಳಗಡೆ ಇರುವುದಿಲ್ಲ, ಆದರೆ ನನ್ನ ಸ್ವತ್ತಿಗೆ ಹೊಂದಿಕೊಂಡಂತೆ ಇರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಿಪಿ–11 ರಲ್ಲಿ ಕಾಣುತ್ತಿರುವ ನಾಮಫಲಕವು ನಾನು ಕ್ರಯಕ್ಕೆ ಪಡೆದ ಸ್ವತ್ತಿಗೆ ಹೊಂದಿಕೊಂಡಂತೆ ಇರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂ.283/2012 ರ ತೀರ್ಪಿನಲ್ಲಿ ಯಾವುದೇ ನಾಮಫಲಕವನ್ನು ಹಾಕಬಾರದು ಎಂಬುದರ ಬಗ್ಗೆ ನಿರ್ಧಿಷ್ಟವಾದ ಆದೇಶವಾಗಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾಮಫಲಕವನ್ನು ಹಾಕಬಾರದು ಎಂಬುದರ ಬಗ್ಗೆ ಯಾವುದೇ ಆದೇಶ ಆಗಿರುವುದಿಲ್ಲ, ಆದರೆ ನನ್ನ ಸ್ವತ್ತಿಗೆ ತೊಂದರೆ ಕೊಡಬಾರದು ಎಂದು ಆದೇಶವಾಗಿರುತ್ತದೆ. ನಾಮಫಲಕದಲ್ಲಿ ವಾದಿಯವರು ಸಲ್ಲಿಸಿರುವ ದಾವೆಯ ನಂಬರ್ ಅನ್ನು ನಮೂದಿಸಲಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ದಾವೆಯ ನಂಬರ್ ಅನ್ನು ನಮೂದಿಸಿರುವುದು ಸರಿ, ಆದರೆ ದಾವೆಯ ಸ್ವರೂಪವನ್ನು ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ತೀರ್ಪುಋಣಿದಾರರು ನಾಮಫಲಕವನ್ನು ಹಾಕಿರುವುದು ನ್ಯಾಯಾಲಯದ ನಿಂದನೆ ಅಲ್ಲ, ಅದು ತೀರ್ಪುಋಣಿದಾರರ ಸಂವಿಧಾನಿಕ ಹಕ್ಕು ಎಂದರೆ ಸರಿಯಲ್ಲ. ತೀರ್ಪುಋಣಿದಾರರು ನನ್ನ ವಿರುದ್ಧ ಅಸಲು ದಾವಾ ಸಂ.3/2021 ರಂತೆ ದಾವಾ ಸಲ್ಲಿಸಿದ ನಂತರ ಅದಕ್ಕೆ ವಿರುದ್ಧವಾಗಿ ನಾನು ಈ ಜಾರಿ ಅರ್ಜಿಯನ್ನು ತೀರ್ಪುಋಣಿದಾರರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**